ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್ತು

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE :

# ಮೇಲ್ಮನೆಯಲ್ಲಿ ಕನ್ನಡಪ್ರಭ ವರದಿ ಪ್ರತಿಧ್ವನಿ

## 30 ಸಾವಿರ ಟನ್ ಪಡಿತರ ಪ್ರತಿ ತಿಂಗಳು ಸೋರಿಕೆ ಬಗ್ಗೆ ಸ್ಪಷ್ಟನೆ ನೀಡಲು ಶಾಸಕರ ಆಗ್ರಹ

• **ಕನ್ನಡಪ್ರಭ ವಾರ್ತೆ** ವಿಧಾನಪರಿಷತ್

ಸಗಟು ಮಳಿಗೆಗಳು ಹಾಗೂ ಪಡಿತರ ಅಂಗಡಿಗಳಲ್ಲಿ ಸುಮಾರು 30 ಸಾವಿರ ಟನ್‌ಗೂ ಅಧಿಕ ಪಡಿತರ ಸೋರಿಕೆಯಾಗುತ್ತಿದ್ದು, ಸರ್ಕಾರ ಈ ಕುರಿತು ಸ್ಪಷ್ಟನೆ ನೀಡಬೇಕು ಎಂದು ಬಿಜೆಪಿ ಸದಸ್ಯ ನಾರಾಯಣಸ್ವಾಮಿ ಒತ್ತಾಯಿಸಿದರು.

ಶೂನ್ಯವೇಳೆಯಲ್ಲಿ ಕನ್ನಡಪ್ರಭ ಪತ್ರಿಕೆಯಲ್ಲಿ ಬುಧವಾರ '30 ಸಾವಿರ ಟನ್ ಪಡಿತರ ಪ್ರತಿ ತಿಂಗಳು ಗುಳುಂ' ಶೀರ್ಷಿಕೆಯಡಿ ಪ್ರಕಟವಾಗಿದ್ದ ವರದಿಯನ್ನು ಅವರು ಪ್ರಸ್ತಾಪಿಸಿದರು. ಪಡಿತರ ವಿತರಣೆಯ ಮೂಲದಲ್ಲೇ ಪ್ರತಿ ತಿಂಗಳು ಸರಾಸರಿ 5,400 ಟನ್ ಆಹಾರ ಧಾನ್ಯ ಸೋರಿಕೆಯಾಗುತ್ತಿದೆ. ಅನ್ನಭಾಗ್ಯ ಯೋಜನೆಯಡಿ 7 ಕೆ.ಜಿ ಅಕ್ಕಿ ಕೊಡಬೇಕು. ಆದರೆ, 5ರಿಂದ 6 ಕೆ.ಜಿ. ಮಾತ್ರ ವಿತರಣೆ ಮಾಡಲಾಗುತ್ತಿದೆ. ನ್ಯಾಯಬೆಲೆ ಅಂಗಡಿ ಮಾಲಿಕರು ಬೆರಳಚ್ಚು ಪಡೆಯಲು ಪ್ರತಿ ಕಾರ್ಡುದಾರರಿಂದ 10 ರು.ನಂತೆ ವಸೂಲಿ ಮಾಡುತ್ತಿದ್ದಾರೆ. ಹೀಗೆ ಅಂದಾಜಿನ ಪ್ರಕಾರ 7ರಿಂದ 8 ಕೋಟಿ ರು.ಗಳನ್ನು ವಸೂಲಿ ಮಾಡಲಾಗುತ್ತಿದೆ ಎಂದು ಆರೋಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಭಾನಾಯಕ, ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು, ಆಹಾರ ಮತ್ತು ನಾಗರಿಕ ಸರಬರಾಜು ಸಚಿವರಿಂದ ಸದನಕ್ಕೆ ಸ್ಪಷ್ಟ ಉತ್ತರ ಒದಗಿಸಲು ಕಳುಹಿಸಿಕೊಡಲಾಗುವುದು ಎಂದು ತಿಳಿಸಿದರು.

'ಪಡಿತರ ಗುಳುಂ' ಬಗ್ಗೆ ಕನ್ನಡಪ್ರಭ ನಿನ್ನೆ ವರದಿ ಮಾಡಿತ್ತು.



**30000 ಟನ್ ಪಡಿತರ ಪ್ರತಿ ತಿಂಗಳೂ ಗುಳುಂ!**

ಸಗಟು ಮಳಿಗೆ, ಪಡಿತರ ಅಂಗಡಿಗಳಲ್ಲಿ ಸೋರಿಕೆ